ದಿನಾಂಕ 04-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಕೆ.ವಿ.ಎಸ್. ವಕೀಲರಿಂದ

ನಾನು ಸಾಲಗುಂದಾ ಗ್ರಾಮದಲ್ಲಿ 20 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಬಿ.ಕಾಂ., ಎಂ.ಬಿ.ಎ. ಪದವಿಧರನಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಯಾವುದೇ ವ್ಯವಸಾಯವನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಹೊಸಪೇಟೆ ನಗರದ ಒಂದು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಲಗುಂದಾ ಗ್ರಾಮದಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಹೊಸಪೇಟೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಹೊಸಪೇಟೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 34 ಜಮೀನು ಗುಡ್ಡದ ಪಕ್ಕದಲ್ಲಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ಗುಡ್ಡಕ್ಕೆ ಹತ್ತಿಕೊಂಡು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಎಕರೆ ನಂತರ ಗುಡ್ಡ ಇರುತ್ತದೆಂದು ನುಡಿಯುತ್ತಾರೆ. ಸರ್ವೆ ನಂ. 34 ರ ಹತ್ತಿರ ಯಾವುದೇ ಸರ್ಕಾರದ ಕಾಲುವೆ ಇರುವುದಿಲ್ಲ. ಸರ್ವೆ ನಂ. 34 ಮತ್ತು 35 ಜಮೀನುಗಳಿಗೆ ರಸ್ತೆ ಮತ್ತು ಕೆನಾಲ್ ಇರುತ್ತವೆ. ಸರ್ವೆ ನಂ. 34 ಜಮೀನು ಸರ್ಕಾರದ ಕೆನಾಲ್ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಪ್‌ಸೆಟ್ ಇರುತ್ತದೆಂದು ನುಡಿಯುತ್ತಾರೆ. ಪ್ರತಿವಾದಿಗೆ ಸೇರಿದ ಜಮೀನಿನ ಸರ್ವೆ ನಂ. 614 ಇರುತ್ತದೆ. ಅದರ ಹಿಸ್ಸಾ ನಂಬರ್, ಆಕಾರ ಮತ್ತು ಕ್ಷೇತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಜಮೀನಿಗೆ ಯಾವುದೇ ರೀತಿಯ ಸರ್ಕಾರದ ಕೆನಾಲ್ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ. 614 ಜಮೀನು ಕೆಂಪು ಮಣ್ಣು ಮಿಶ್ರಿತ ಮಸಾರಿ ಜಮೀನು ಎಂದರೆ ಸರಿ. ಸದರಿ ಜಮೀನಿನಲ್ಲಿ ಸಜ್ಜೆ, ಜೋಳ ಮತ್ತು ಹತ್ತಿ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ನೀರಿನ ತೊಂದರೆ ಇದ್ದಾಗ ಮಾತ್ರ ಸದರಿ ಬೆಳೆಗಳನ್ನು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ನೀರನ್ನು

ಪಂಪ್‌ಸೆಟ್?ಮೂಲಕವೇ ತೆಗೆದುಕೊಳ್ಳಬೇಕು ಎಂದರೆ ಸರಿ. ಬೇರೆ ವ್ಯವಸ್ಥೆಯ ಮೂಲಕ ನೀರು ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ಪಂಪ್‌ಸೆಟ್ ಹೊರತುಪಡಿಸಿ ಇತರೆ ನೀರಿನ ಮೂಲಗಳು ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂ. 614 ರ ಚೆಕ್‌ಬಂದಿ ಹೇಳಲು ಆಗುವುದಿಲ್ಲ.

ನಾನು ಸರ್ವೆ ನಂ. 24, 25, 34 ಮತ್ತು 35 ನೇದ್ದರಲ್ಲಿ ಪಂಪ್‌ಸೆಟ್ ಲೈನ್ ಮಾಡಿರುತ್ತೇನೆ. ಸದರಿ ಜಮೀನುಗಳನ್ನು ಹೊರತುಪಡಿಸಿ ಬೇರೆ ಜಮೀನುಗಳಿಗೆ ಪಂಪ್‌ಸೆಟ್ ಪೈಪ್‌ಲೈನ್ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ. 614 ಕ್ಕೆ ಕಾಲುವೆ ಮುಖಾಂತರ ನೀರು ತೆಗೆದುಕೊಂಡು ಹೋಗಿರುತ್ತೇವೆಂದು ನುಡಿಯುತ್ತಾರೆ. ಸರ್ವೆ ನಂ. 614 ಜಮೀನನ್ನು ನಾನೇ ಸಾಗುವಳಿ ಮಾಡುತ್ತಿಲ್ಲ. ಸದರಿ ಹೊಲವನ್ನು ಯಾರು ಮಾಡುತ್ತಿದ್ದಾರೆಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂ. 34 ಮತ್ತು 35 ಜಮೀನುಗಳಿಗೆ ಪಂಪ್‌ಸೆಟ್ ಲೈನ್ ಮಾಡಿ ನನ್ನ ತಂದೆ ಸರ್ಕಾರದಿಂದ ಆದೇಶ ಪಡೆದಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸರ್ವೆ ನಂಬರ್‌ಗೆ ಸರ್ಕಾರದಿಂದ ಅನುಮತಿಯನ್ನು ಪಡೆಯದೇ ಅಕ್ರಮವಾಗಿ ಪೈಪ್‌ಲೈನ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನಲ್ಲಿ ನೀರಿನ ಅಭಾವ ಇದ್ದುದರಿಂದ ಜೋಳ ಬೆಳೆದಿರುತ್ತಾರೆ. ಈ ದಿನ ನ್ಯಾಯಾಲಯಕ್ಕೆ ನನ್ನನ್ನು ಪ್ರತಿವಾದಿಯ ಮಗನಾದ ಜಮೀರ್ ಕರೆದುಕೊಂಡು ಬಂದಿರುತ್ತಾರೆ. ಆತನೇ ತಮ್ಮ ಹೊಲದಲ್ಲಿ ನೀರಾವರಿ ಇದೆ ಅಂತಾ ಹೇಳಿ ಸಾಕ್ಷ್ಯ ನುಡಿಯುವಂತೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಸರ್ಕಾರದ ಪ್ರಕಾರ ಖುಷ್ಕಿ ಭೂಮಿ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ನಾವು ಪಂಪ್‌ಸೆಟ್ ಹಾಕಿರುವುದರಿಂದ ಸದರಿ ವಿಷಯದ ಬಗ್ಗೆ ಹೇಳುತ್ತಿದ್ದೇನೆ. ನನ್ನ ತಂದೆ ಸದರಿಯವರಿಗೆ ನೀರು ಕೊಡುತ್ತಾ ಬಂದಿದ್ದರು ನಾನೂ ಸಹ ಕೊಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಎಷ್ಟು ಜನ

ಅಣ್ಣತಮ್ಮಂದಿರು ಎಂದು ನನಗೆ ಮಾಹಿತಿ ಇಲ್ಲ. ನಾನು ಪ್ರತಿವಾದಿಗೆ ಪಂಪ್‌ಸೆಟ್ ಮಜಖಾಂತರ ಯಾವುದೇ ರೀತಿ ನೀರನ್ನು ಕೊಡುತ್ತಿಲ್ಲ ಎಂದರೆ ಸರಿಯಲ್ಲ. ಆದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಾಗೆಯಲ್ಲಿ ಸರ್ಕಾರದ ಪ್ರಕಾರ ಖುಷ್ಕಿ ಭೂಮಿಗೆ ರೂ. 2,10,000/- ಮೌಲ್ಯ ಇರುತ್ತದೆ ಎಂದರೆ ಸರಿ. ಪಃನಿ ಪತ್ರಿಕೆಯಲ್ಲಿ ನೀರಾವರಿ ಇಲ್ಲದೇ ಇದ್ದರೂ ಸಹ ಮತ್ತು ಪಂಪ್‌ಸೆಟ್ ಇದ್ದರೂ ಸಹ ಭತ್ತ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಆದ್ದರಿಂದ ಸರ್ವೆ ನಂ. 614 ಜಮೀನಿಗೆ ರೂ. 2,20,000/- ಮೌಲ್ಯ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ. 34, 35 ಮತ್ತು 614 ಜಮೀನುಗಳಿಗೆ ಕೃಷಿ ಭೂಮಿಗಳಿದ್ದು, ಪಂಪ್‌ಸೆಟ್ ಇದ್ದರೆ ಮಾತ್ರ ನೀರಾವರಿ ಆಗುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನಲ್ಲಿ ಎಷ್ಟು ಕ್ವಿಂಟಲ್ ಜೋಳ ಬೆಳೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗೆ ನೀರು ಕೊಡುವುದರಿಂದ ರೂ. 2000/- ಗುತ್ತಿಗೆ ಕೊಡುತ್ತಾರೆ. ಅಲಿಸಾಬ್‌ಶಿವರು ಆತನ ಪರವಾಗಿ ಸಾಕ್ಷ್ಯ ನುಡಿಯುವಂತೆ ಹೇಳಿದ್ದರಿಂದ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.